
ಸೋದರ ಭಾವ ಇಲ್ಲದ ರಾಜನನ್ನು ರಾಜ್ಯ ಸಹಿಸಿಕೊಳ್ಳುವುದಿಲ್ಲ. ರಾಜನೇ ಲಂಚ ಅಪೇಕ್ಷಿಸುವವನಾದರೆ ಜನರು ಎಲ್ಲಿ ನ್ಯಾಯ ಕೇಳಬೇಕು?

‘ನಿನಗೊಂದು ವಿಷಯ ಗೊತ್ತಾ? ರಾಜನಾದವನಿಗೆ ಸ್ವಂತದ್ದು ಅಂತ ಏನೊಂದೂ ಇರುವುದಿಲ್ಲ. ಜನಪರ ಕೆಲಸ, ಜನಪರ ಚಿಂತನೆ, ಜನರ ಸೌಖ್ಯ ಬಿಟ್ಟರೆ ಬೇರೆ ಯಾವುದೂ ಅವನ ಮನಸ್ಸಿನಲ್ಲಿ ಸುಳಿಯಬಾರದು. ಪ್ರಜೆಗಳ ಸೌಖ್ಯವೇ ರಾಜನ ಸೌಖ್ಯ, ಪ್ರಜೆಗಳ ಹಿತವೇ ಅವನ ಹಿತ. ರಾಜನ ಸರ್ವಸ್ವವೂ ಪ್ರಜೆಗಳ ಸಲುವಾಗಿಯೇ ಇದೆ. ರಾಜನನ್ನು ಕಂಡರೆ ಜನರು (ದರೋಡೆಕೋರರನ್ನು ಕಂಡಾಗ) ಹೆದರುವ ಪರಿಸ್ಥಿತಿ ಇರಬಾರದು. ಆದರೆ (ತಂದೆಗೆ ಮಗ ನೀಡುವ) ಗೌರವದಿಂದ ಆದರಿಸುವಂಥ ವಾತಾವರಣ ಇರಬೇಕು. ತನ್ನ ಸಂಬಂಧವಾದ (ಅಧಿಕಾರ ಚಲಾವಣೆಯ) ಭಯದಿಂದಲೂ, ಇತರರ (ಶತ್ರುಭೀತಿ, ಕಳ್ಳಕಾಕರ) ಭಯದಿಂದಲೂ, ಪಾರಸ್ಪರಿಕವಾದ (ಅನ್ಯಾಯ) ಭಯದಿಂದಲೂ, ಅಮಾನುಷರ ಭಯದಿಂದಲೂ ರಾಜನು ಪ್ರಜೆಗಳನ್ನು ರಕ್ಷಿಸಬೇಕು.

‘ಭೂಲೋಕದಲ್ಲಿರುವ ನಮ್ಮ ಮಕ್ಕಳನ್ನು ಬಡತನ ಕಾಡುತ್ತಿದೆ. ನಿನ್ನ ಚಿಂತೆಯೂ ಇದೇ ಅಲ್ಲವೇ? ಆದರೆ ನೋಡು, ಈ ಜನರು ತಮ್ಮ ಬಡತನಕ್ಕೂ ನಮ್ಮನ್ನೇ ಹೊಣೆಯಾಗಿಸುತ್ತಿದ್ದಾರೆ. ‘ಎಲ್ಲವೂ ಶಿವನಿಚ್ಛೆ, ಶಿವಕೊಟ್ರೆ ಉಂಟು – ಇಲ್ಲದಿದ್ದರೆ ಉಪವಾಸ’ ಅಂತ ನನ್ನ ತಲೆಯ ಮೇಲೆ ತಮ್ಮ ಭಾರವನ್ನೂ ಹೊರಿಸುತ್ತಿದ್ದಾರೆ. ಆ ಗಂಗೆಯನ್ನೂ ಈ ಚಂದ್ರನನ್ನೂ ಹೊತ್ತ ನನಗೆ ಭೂಲೋಕದ ಮಕ್ಕಳು ಭಾರವೇ? ಹೆತ್ತವರಿಗೆ ಎಂದಾದರೂ ಅವರ ಮಕ್ಕಳು ಭಾರ ಎನಿಸುತ್ತಾರೆಯೇ? ಆದರೆ ನನಗೆ ಇವರು ಯೋಚನೆ ಮಾಡುವ ರೀತಿಯೇ ಸರಿಕಾಣುವುದಿಲ್ಲ.



‘ನೋಡು ಪಾರ್ವತಿ, ಮನುಷ್ಯ ಪ್ರಯತ್ನವಿಲ್ಲದೆ ಯಾವ ಕಾರ್ಯವೂ ಸಿದ್ಧಿಸುವುದಿಲ್ಲ. ಬಡತನ ಹೋಗಬೇಕು ಎಂದರೆ ಹಣ ಸಂಪಾದನೆ ಮಾಡಿಕೊಳ್ಳಬೇಕು. ಹಣ ಸಂಪಾದನೆಗೆ ಶ್ರಮ ಹಾಕಬೇಕು. ರೈತರು ನೆಲವನ್ನು ಹದಮಾಡಿ, ಉತ್ತಿ, ಬಿತ್ತಿದರೆ ತಾನೆ ಮಳೆ ಬಂದಾಗ ಪೈರು ಮೊಳಕೆಯೊಡೆಯಲು ಸಾಧ್ಯ. ಮಳೆ ಸುರಿಸುವುದು ನನ್ನ ಜವಾಬ್ದಾರಿ. ಆದರೆ ಉಳುವುದು ಮನುಷ್ಯರ ಕೆಲಸವಲ್ಲವೇ? ಕೆಲವರಂತೂ ಮೂರುಹೊತ್ತೂ ಗ್ರಹ–ನಕ್ಷತ್ರಗಳೇ ಎಲ್ಲವನ್ನೂ ನಿರ್ವಹಿಸುತ್ತವೆ. ನಮ್ಮದೆನ್ನುವುದು ಏನೂ ಇಲ್ಲ ಎಂದು ಹುಚ್ಚುಚ್ಚಾಗಿ ಮಾತನಾಡುತ್ತಾರೆ. ಗ್ರಹ–ನಕ್ಷತ್ರಗಳು ಹಿಂದಿನ ಜನ್ಮದ ನಮ್ಮ ಕರ್ಮಗಳನ್ನು ಸೂಚಿಸಬಹುದು. ಆದರೆ ಅವಕ್ಕೆ ಕರ್ಮದ ಕರ್ತೃತ್ವವಿದೆಯೇ? (ಪೆಟ್ರೋಲ್ ಎಷ್ಟು ಇದೆ ಎಂದು ಎಂಜಿನ್‌ನ ನೀಡಲ್ ತೋರಿಸಬಹುದು. ಆದರೆ ಅದಕ್ಕೆ ಗಾಡಿಯನ್ನು ಮುಂದಕ್ಕೆ ಓಡಿಸುವ ಸಾಮರ್ಥ್ಯವಿದೆಯೇ?)

‘ಇನ್ನೊಂದು ವಿಷಯ ಸ್ಪಷ್ಟವಾಗಿ ತಿಳಿದುಕೊ. ಇಚ್ಛಿತ ಫಲ ಯಾವುದೇ ಇರಲಿ, ಅದರ ಮಾರ್ಗವೂ ಬಹಳ ಮುಖ್ಯ. ಅಡ್ಡದಾರಿಯಿಂದ ಹಣಮಾಡಿದರೆ ಈ ಜನ್ಮದಲ್ಲಿ ಸುಖ ಸಿಗಬಹುದು. ಆದರೆ ಮುಂದಿನ ಅನೇಕ ಜನ್ಮಗಳು ಅವರು ಕಷ್ಟದ ಸರಮಾಲೆಯನ್ನೇ ಅನುಭವಿಸಬೇಕಾಗುತ್ತೆ. ಒಳ್ಳೆಯ ಪ್ರಯತ್ನದಿಂದ ಕಾರ್ಯಸಿದ್ಧಿಗೆ ಯತ್ನಿಸಿದರೆ ಕೀರ್ತಿ, ಕೆಟ್ಟಮಾರ್ಗದಿಂದ ಯತ್ನಿಸಿದರೆ ಅಪಕೀರ್ತಿ. ಮನುಷ್ಯ ತನ್ನಿಂದ ಸಾಧ್ಯವಾಗುವ ಎಲ್ಲ ಪ್ರಯತ್ನಗಳನ್ನೂ ಯೋಗ್ಯರೀತಿಯಲ್ಲಿ ಮಾಡಿ, ಮುಂದಿನದ್ದನ್ನು ದೈವಬಲಕ್ಕೆ ಬಿಡಬೇಕು. ಮಾನವ ಯತ್ನ ಮತ್ತು ದೈವಸಹಾಯ ಎರಡೂ ಸೇರಿದರೆ ಕೆಲಸಗಳು ಆಗುತ್ತವೆ. ಬಡತನ, ಅಜ್ಞಾನ ನೀಗುತ್ತದೆ. ಕೆಲಸವನ್ನೇ ಮಾಡದವನಿಗೆ ದೈವಸಹಾಯ, ಓದುವ ಯತ್ನವನ್ನೇ ಮಾಡದವನಿಗೆ ಜ್ಞಾನ ಎಂದಿಗೂ ಸಿಗದು.

‘ನಾನು ಈ ಜಗತ್ತಿನ ತಂದೆ. ಎಲ್ಲ ಮಕ್ಕಳೂ ನನ್ನ ಕಣ್ಣಿಗೆ ಸಮಾನರೇ. ಆದರೆ ತಮ್ಮ ಪರಿಸ್ಥಿತಿ ಸುಧಾರಿಸಿಕೊಳ್ಳಲು ಕಷ್ಟಪಟ್ಟು, ಶ್ರದ್ಧೆಯಿಂದ ಕೆಲಸ ಮಾಡುವವರನ್ನು ಕಂಡರೆ ನನಗೆ ಇಷ್ಟ. ಅಂಥವರಿಗೆ ನಾನು ಬೇಗ ಒಲಿಯುತ್ತೇನೆ. ಈ ಭೂಮಿಗೆ ಜೀವವನ್ನು ತರುವಾಗಲೇ ಅದರ ಜೀವನನಿರ್ವಹಣೆಯ ಬಗ್ಗೆ ಯೋಚಿಸಿರುತ್ತೇನೆ. ಒಂದಿಷ್ಟು ಪ್ರತಿಭೆಯನ್ನು, ಸಾಮರ್ಥ್ಯವನ್ನು ಇಟ್ಟಿರುತ್ತೇನೆ. ಮನುಷ್ಯರೂ ಅಷ್ಟೇ, ತಮ್ಮ ಸಾಮರ್ಥ್ಯ, ಸ್ವಭಾವ, ಪ್ರತಿಭೆ ಕಂಡುಕೊಳ್ಳಲು ಮೊದಲು ಯತ್ನಿಸಬೇಕು. ಜೀವನ ನಿರ್ವಹಣೆಗೆ ಎಷ್ಟು ಉಪಾಯಗಳಿವೆಯೋ ಆ ಎಲ್ಲ ಉಪಾಯಗಳನ್ನೂ ನ್ಯಾಯಪೂರ್ವಕವಾಗಿ ವಿಚಾರಮಾಡಬೇಕು. ತನ್ನಲ್ಲಿರುವ ಶಕ್ತಿ (ಆತ್ಮಬಲ), ಉಪಾಯ, ದೇಶ, ಕಾಲ, ಕಾರಣ, ಪ್ರವಾಸ ಮೊದಲಾದ ವಿಷಯಗಳಲ್ಲಿ ಯುಕ್ತಿಪೂರ್ವಕ ವಿಚಾರ ಮಾಡಬೇಕು. ದೈವಾನುಕೂಲವನ್ನೂ ಗಮನಿಸಿ ಯಾವ ವೃತ್ತಿಯಿಂದ ತನ್ನ ಜೀವಿಕೆಯು ಸುಗಮವಾಗಿ ಸಾಧಿಸಲ್ಪಡುವುದೆಂದು ಕಂಡುಬರುವುದೋ ಆ ವೃತ್ತಿಯನ್ನು (ಉದ್ಯೋಗ ಅಥವಾ ಕಸುಬು ಅಥವಾ ವ್ಯಾಪಾರ) ಆರಂಭಿಸಬೇಕು.

‘ಇಷ್ಟಪಟ್ಟ ಕೆಲಸ ಸಿಕ್ಕಿತೆಂದು ಮೈಮರೆಯಬಾರದು. ಉದ್ಯೋಗದಲ್ಲಿ ಮೇಲ್ಮೆ ಪಡೆಯಲು, ಮಾಡುತ್ತಿರುವ ಕೆಲಸವನ್ನು ಕಾಪಾಡಿಕೊಳ್ಳಲು ಯತ್ನಿಸಬೇಕು. ಹಾಗೆಂದು ಕೆಲಸ ಮಾಡುವುದರಲ್ಲಿಯೇ ಮೈಮರೆಯದೇ ಅದರ ಫಲವನ್ನು ಉಪಭೋಗಿಸುತ್ತಲೂ ಇರಬೇಕು. ಸಂಪಾದಿಸಿದ ಹಣದಿಂದ ಕುಟುಂಬದೊಂದಿಗೆ ಸಂತೋಷವಾಗಿರಬೇಕು ಮತ್ತು ಕ್ಷಣಗಳನ್ನು ಮನಃಪೂರ್ವಕ ಅನುಭವಿಸಬೇಕು. ಕಸುಬು ಸಿದ್ಧಿಸಿತೆಂದು ಮೈಮರೆತರೆ ವೃತ್ತಿಯೇ ವಿನಾಶವಾಗುವಂತೆ ಆಗುತ್ತದೆ. ವೃತ್ತಿಯ ರಕ್ಷಣೆ ಮತ್ತು ವೃದ್ಧಿಗಳನ್ನು ಮಾಡದೇ ಉಪಭೋಗಿಸುತ್ತಲೇ ಇದ್ದರೆ ಪರ್ವತ ಸದೃಶವಾದ ಧನರಾಶಿಯೂ ಕೆಲವೇ ದಿನಗಳಲ್ಲಿ ಕರಗಿಹೋಗುತ್ತದೆ.

‘ನಾನೇನೂ ಬ್ರಹ್ಮಸೂತ್ರಭಾಷ್ಯಗಳಂತೆ ಸಂಕೀರ್ಣಸೂತ್ರಗಳನ್ನು (ಕೋಡ್‌ವರ್ಡ್) ಹೇಳುತ್ತಿಲ್ಲ. ಇದು ಸರಳವಾದ ಸಂಗತಿ. ಒಬ್ಬ ಹುಟ್ಟು ದರಿದ್ರನಿದ್ದ ಅಂದುಕೊ. ಅವನಿಗೆ ದೈವಸಹಾಯದಿಂದ ಕಡಿಮೆ ಬಡ್ಡಿಗೆ ಸಾಲ ದೊರೆಯಿತು. ಮನುಷ್ಯಯತ್ನದಿಂದ ಸೌದೆ ವ್ಯಾಪಾರ ಮಾಡಿ, ಮೇಲೆ ಬಂದ. ಆದರೆ, ತನ್ನಲ್ಲಿ ಸಾಕಷ್ಟು ಹಣ ಸಂಗ್ರಹವಾಗಿದೆ ಎಂದು ಕೆಲಸದಲ್ಲಿ ಆಸಕ್ತಿ ಕಳೆದುಕೊಂಡು, ಸಂಸಾರ–ಸುಖಗಳಲ್ಲಿಯೇ ಮೈಮರೆಯಲು ಆರಂಭಿಸಿದ. ಮೊದಲು ಒಣಗಿದ ಸೌದೆಯನ್ನು ಮಾತ್ರ ವಿಂಗಡಿಸಿ, ಸಣ್ಣಗೆ ಕತ್ತರಿಸಿ ಮಾರುತ್ತಿದ್ದ. ಕೆಲಸದಲ್ಲಿ ಆಸಕ್ತಿ ಕಳೆದುಕೊಂಡ ನಂತರ ಹಸಿಸೌದೆ, ಅಡ್ಡಾದಿಡ್ಡಿ ಸೀಳಿದ ಸೌದೆಗಳನ್ನೂ ಗ್ರಾಹಕರಿಗೆ ಮಾರಲು ಆರಂಭಿಸಿದ. ಅವನ ಅಂಗಡಿಗಳ ಸುತ್ತಮುತ್ತ ಹಲವು ಸೌದೆ ಅಂಗಡಿಗಳು ಬಂದವು. ಜನರು ಅಲ್ಲಿಗೆ ಹೋಗಲು